O.S. ನಂಬರಃ 25/2021
ಡಿ. ಡಬ್ಲ್ಯೂಃ 1

ದಿಃ 01-10-2024ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ವಾದಿಯ ಪರ ವಕೀಲರಾದ ಶ್ರೀ ವಿ.ಎಸ್.ಎನ್ ಇವರಿಂದಃ

ಕಾಮಣ್ಣ ವೆಂಕಟೇಶ ನಾಯಕ ಇವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು 3 ಜನ ಮಕ್ಕಳು ಇದ್ದು, ಅವರ ಹೆಸರು ಯಮುನಾ, ಕಲ್ಯಾಣಿ ಮತ್ತು ಚುಡಿಯಾ ಆಗಿರುತ್ತದೆ. ಯಮುನಾ ಇವರು ವಯಸ್ಸಿನಲ್ಲಿ ದೊಡ್ಡವರಾಗಿರುತ್ತಾರೆ. ವಾದಿಯರು ಯಾರ ಮಕ್ಕಳು ಎಂದರೆ ಸಾಕ್ಷಿಯು ಯಮುನಾ ಇವರ ಮಕ್ಕಳು ಎಂದು ನುಡಿಯುತ್ತಾರೆ. ಮೊದಲು ಜಮೀನಿನ ದೇಖರೇಖೆಯನ್ನು ಯಾರು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಯಮುನಾ ಹಾಗೂ ನನ್ನ ತಾಯಿ ಕಲ್ಯಾಣಿ ಇವರು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಯಮುನಾ ಇವರು ತೀರಿಕೊಂಡು ಸುಮಾರು 12 ವರ್ಷಗಳು ಆಗಿರುತ್ತವೆ. ಯಮುನಾ ಇವರು ತೀರಿಕೊಂಡ ನಂತರ ಅವರ ಮಕ್ಕಳಾದ ವಾದಿಯರು ದಾವಾ ಜಮೀನನ್ನು ದೇಖರೇಖೆ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ಕಾಮಣ್ಣ ವೆಂಕಟೇಶ ನಾಯಕ ಇವರ ಮನೆ ಇಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಹೊನ್ನೇಗುಡಿಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ ನೆನಪಿರುವುದಿಲ್ಲ. ಈಗಲೂ ಸದರಿ ಮನೆ ಇದೆಯಾ ಎಂದರೆ ಸಾಕ್ಷಿಯು ಲಡ್

ಆಗಿ ಹೋಗಿರುತ್ತದೆ ಎಂದು ನುಡಿಯುತ್ತಾರೆ. ಯಮುನಾ ಇವಳು ಕಾಮಣ್ಣನ ಮಗಳು ಆಗಿದ್ದರಿಂದ ಆಕೆಗೂ ಸಹ ದಾವಾ ಆಸ್ತಿಗಳಲ್ಲಿ ಪಾಲು ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳು ಎಲ್ಲ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ.

5ನೇ ಪ್ರತಿವಾದಿಯ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.